**ಕರ್ನಾಟಕ ವಿಧಾನಸಭೆ**
**ಹದಿನೈದನೇ ವಿಧಾನಸಭೆ**
**ಹದಿಮೂರನೇ ಅಧಿವೇಶನ**

# ಕರ್ನಾಟಕ ಸ್ಟಾಂಪು (ಮೂರನೇ ತಿದ್ದುಪಡಿ) ವಿಧೇಯಕ, 2022

**(2022ರ ವಿಧಾನಸಭೆಯ ವಿಧೇಯಕ ಸಂಖ್ಯೆ–24)**

ಕರ್ನಾಟಕ ಸ್ಟಾಂಪು ಅಧಿನಿಯಮ, 1957ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಸ್ಟಾಂಪು ಅಧಿನಿಯಮ, 1957 (1957ರ ಕರ್ನಾಟಕ ಅಧಿನಿಯಮ 34) ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೂರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಸ್ಟಾಂಪು (ಮೂರನೇ ತಿದ್ದುಪಡಿ) ಅಧಿನಿಯಮ, 2022 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೆ ಜಾರಿಗೆ ಬರತಕ್ಕದ್ದು.

**2. ಅನುಸೂಚಿಯ ತಿದ್ದುಪಡಿ.-** ಕರ್ನಾಟಕ ಸ್ಟಾಂಪು ಅಧಿನಿಯಮ, 1957 (1957ರ ಕರ್ನಾಟಕ ಅಧಿನಿಯಮ 34)ರ ಅನುಸೂಚಿಯಲ್ಲಿನ 52ನೇ ಅನುಚ್ಛೇಧದ (ಡಿ) ಖಂಡದಲ್ಲಿ,-

(i) ಪರಂತುಕದಲ್ಲಿ "ಮತ್ತು" ಎಂಬ ಪದದ ಬದಲಿಗೆ "ಅಥವಾ" ಎಂಬ ಪದವನ್ನು ಪ್ರತಿಯೋಜಿಸತಕ್ಕದ್ದು; ಮತ್ತು

(ii) ಹಾಗೆ ತಿದ್ದುಪಡಿ ಮಾಡಲಾದ ಪರಂತುಕದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"**ವಿವರಣೆ:** ಈ ಖಂಡದ ಉದ್ದೇಶಕ್ಕಾಗಿ "**ನ್ಯಾಸ**" (trust) ಎಂದರೆ ಆದಾಯ ತೆರಿಗೆ ಅಧಿನಿಯಮ, 1961 (1961ರ ಕೇಂದ್ರ ಅಧಿನಿಯಮ ಸಂ.43)ರ 12ಎಎ ಅಥವಾ 12ಎಬಿ ಪ್ರಕರಣಗಳ ಉಪಬಂಧಗಳ ಅಡಿಯಲ್ಲಿ ನೋಂದಾಯಿತವಾಗಿರುವ ಯಾವುದೇ ಘಟಕವನ್ನು ನ್ಯಾಸವು ಒಳಗೊಂಡಿರತಕ್ಕದ್ದು.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಆದಾಯ ತೆರಿಗೆ ಅಧಿನಿಯಮ, 1961 (1961ರ ಕೇಂದ್ರ ಅಧಿನಿಯಮ ಸಂ.43)ರ 12ಎಎ ಅಥವಾ 12ಎಬಿ ಪ್ರಕರಣಗಳ ಉಪಬಂಧಗಳ ಅಡಿಯಲ್ಲಿನ "**ನ್ಯಾಸ**"ಕ್ಕೆ **ವಿವರಣೆ**ಯನ್ನು ನೀಡಲು ಕರ್ನಾಟಕ ಸ್ಟಾಂಪು ಅಧಿನಿಯಮ, 1957 (1957ರ ಕರ್ನಾಟಕ ಅಧಿನಿಯಮ 34)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಿದೆ.

ಆದ್ದರಿಂದ ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಆರ್. ಅಶೋಕ**
ಕಂದಾಯ ಮಂತ್ರಿ

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

**ಅನುಬಂಧ**
**ಕರ್ನಾಟಕ ಸ್ಟಾಂಪು ಅಧಿನಿಯಮ, 1957ರ**
**(1957ರ ಕರ್ನಾಟಕ ಅಧಿನಿಯಮ 34) ಉದ್ಧೃತ ಭಾಗ**

**Xxx xxx xxx**

**ಅನುಸೂಚಿ**

**Xxx xxx xxx**

| | |
|---|---|
| **52. ಇವುಗಳ ವರ್ಗಾವಣೆ.-**(ಪ್ರತಿಫಲ ಸಹಿತ ಅಥವಾ ಅದಿಲ್ಲದೆ) | |
| (ಎ)ಮಾರಬಹುದಾದ ಭದ್ರುತೆಗಳಾಗಿರುವ ಡಿಬೆಂಚರುಗಳು-ಆ ಡಿಬೆಂಚರು ಸುಂಕಕ್ಕೆ ಗುರಿಯಾಗಿರಲಿ ಅಥವಾ ಇಲ್ಲದಿರಲಿ | ಡಿಬೆಂಚರಿನ ಮುಖ ಮೊಬಲಗಿಗೆ ಸಮನಾದ ಪ್ರತಿಫಲಕ್ಕಾಗಿನ ಹಸ್ತಾಂತರಣ ಪ್ರತಿ ನೂರು ರೂಪಾಯಿಗಳಿಗೆ ಅದರ ಭಾಗಕ್ಕೆ ಒಂದು ಸಾವಿರ ಗರಿಷ್ಠಕ್ಕೊಳಪಟ್ಟು ಪಾವತಿಸಬೇಕಾದ ಸುಂಕ ಐವತ್ತು ಪೈಸೆ |
| (ಬಿ) ಬಂಧಪತ್ರ ಅಡಮಾನ ಪತ್ರ ಅಥವಾ ವಿಮಾ ಪಾಲಿಸಿಯ ಮೂಲಕ ಭದ್ರುತೆಗೊಳಿಸದ ಯಾವುದೇ ಹಿತಾಸಕ್ತಿ | |
| (i) ಅಂತಹ ಬಂಧಪತ್ರ, ಅಡಮಾನ ಪತ್ರ ಅಥವಾ ಪಾಲಿಸಿಯ ಮೇಲಿನ ಸುಂಕವು ಇಪ್ಪತ್ತೆರಡು ರೂಪಾಯಿ ಐವತ್ತು ಪೈಸೆಯನ್ನು ಮೀರದಿದ್ದರೆ | ಅಂತಹ ಬಂಧಪತ್ರ, ಅಡಮಾನ ಪತ್ರ ಅಥವಾ ವಿಮಾಪಾಲಿಸಿಯ ಮೇಲೆ ವಿಧಿಸಬಹುದಾದಂಥ ಸುಂಕ |
| (ii) ಯಾವುದೇ ಇತರ ಸಂದರ್ಭದಲ್ಲಿ | ಒಂದು ನೂರು ರೂಪಾಯಿಗಳು |
| (ಸಿ) ಅಡ್ಮಿನಿಷ್ಟ್ರೇಟರ್ ಜನರಲ್ಲುಗಳ (ಅಧಿನಿಯಮ, 1963ರ 25ನೇ ಪ್ರಕರಣದ ಮೇರೆಗಿನ ಸ್ವತ್ತು | ಒಂದು ನೂರು ರೂಪಾಯಿಗಳು |
| (ಡಿ) ಒಂದು ನ್ಯಾಸದಿಂದ ಇನ್ನೊಂದು (ವರ್ಗಾವಣೆಯಾಗುತ್ತಿರುವ) ಸ್ವತ್ತಿನ ನ್ಯಾಸಕ್ಕೆ; ಅಥವಾ ನ್ಯಾಸದಿಂದ ನ್ಯಾಸಧಾರಿಗೆ ಮಾರುಕಟ್ಟೆ ಮೌಲ್ಯ ಅಥವಾ ಅಂಥ ಅಥವಾ ಫಲಾನುಭವಿಗೆ, ಅಥವಾ ವರ್ಗಾವಣೆಯ ಪ್ರತಿಫಲ ಇವುಗಳಲ್ಲಿ ನ್ಯಾಸಧಾರಿಯಿಂದ ಸಂದರ್ಭಾನುಸಾರ ನ್ಯಾಸಕ್ಕೆ ಅಥವಾ ನ್ಯಾಸಧಾರಿಗೆ ಅಥವಾ ಫಲಾನುಭವಿಗೆ ವರ್ಗಾವಣೆಯಾಗುತ್ತಿರುವ ನ್ಯಾಸದ ಯಾವುದೇ ಸ್ವತ್ತಿಗೆ | ಸ್ವತ್ತಿನ ಮಾರುಕಟ್ಟೆ ಮೌಲ್ಯ (ಅಂಥ ವರ್ಗಾವಣೆ ವಿಷಯಕ್ಕೆ ಒಳಪಟ್ಟು) ಅಥವಾ ಅಂಥ ವರ್ಗಾವಣೆಯ ಪ್ರತಿಫಲ ಇವುಗಳಲ್ಲಿ ಯಾವುದು ಹೆಚ್ಚೋ ಅದರ ಮೇಲೆ ಅನುಚ್ಛೇದ 20 (1) ರ ಪ್ರಕಾರ ಹಸ್ತಾಂತರಣಕ್ಕೆ ಅನ್ವಯವಾಗುವ ಸ್ಟಾಂಪು ಸುಂಕ.<br>ಪರಂತು, ಸಾರ್ವಜನಿಕ, ಧಾರ್ಮಿಕ ಮತ್ತು ಧರ್ಮಾದಾಯ ದತ್ತಿಗಳಿಗೆ ಅಂಥ ವರ್ಗಾವಣೆಗಾಗಿ ಸ್ಟಾಂಪು ಸುಂಕ ಒಂದು ಸಾವಿರ ರೂಪಾಯಿಗಳಾಗಿರತಕ್ಕದ್ದು. |
| **ವಿನಾಯಿತಿಗಳು,-**<br>ಹಿಂಬರಹದ ಮೂಲಕ ಇವುಗಳ ವರ್ಗಾವಣೆಗಳು,-<br>(ಎ) ವಿನಿಮಯ ಪತ್ರ ಚೆಕ್ಕು ಅಥವಾ ಪ್ರಾಮಿಸರಿ ನೋಟು<br>(ಬಿ) ವಹನ ಪತ್ರ ವಶಾವಣೆ ಆದೇಶ ಸರಕುಗಳು ಅಥವಾ ಸರಕುಗಳ ಬಗೆಗಿನ ಸ್ವಾಮ್ಯದ ವಾಣಿಜ್ಯ ದಸ್ತಾವೇಜಿಗಾಗಿನ ವಾರೆಂಟ್<br>(ಸಿ) ವಿಮಾ ಪಾಲಿಸಿ<br>(ಡಿ) ಕೇಂದ್ರ ಸರ್ಕಾರದ ಅಥವಾ ರಾಜ್ಯ<br>ಸರ್ಕಾರದ ಭದ್ರುತೆಗಳು<br>(8ನೇ ಪ್ರಕರಣವನ್ನು ಸಹ ನೋಡಿ) | |

**xxx xxx xxx**

ಸರ್ಕಾರಿ ಮುದ್ರಣಾಲಯ, ವಿಕಾಸಸೌಧ ಘಟಕ, ಬೆಂಗಳೂರು, ಪಿ7, ಕಾಸೂ , ಪ್ರತಿಗಳು 500, 19ನೇ ಸೆಪ್ಟೆಂಬರ್, 2022

**KARNATAKA LEGISLATIVE ASSEMBLY**
**FIFTEENTH LEGISLATIVE ASSEMBLY**
**THIRTEENTH SESSION**

# THE KARNATAKA STAMP (THIRD AMENDMENT) BILL, 2022

**(LA Bill No. 24 of 2022)**

A Bill further to amend the Karnataka Stamp Act, 1957.

Whereas it is expedient further to amend the Karnataka Stamp Act, 1957 (Karnataka Act 34 of 1957) for the purposes hereinafter appearing;

Be it enacted by the Karnataka State Legislature in the Seventy third year of the Republic of India as follows:-

**1. Short title and commencement.–** (1) This Act may be called the Karnataka Stamp (Third Amendment) Act, 2022.

(2) It shall come into force at once.

**2. Amendment of Schedule.-** In the Karnataka Stamp Act, 1957 (Karnataka Act 34 of 1957), in the schedule, in article 52, in clause (d),-

(i) in the proviso for the word “and” the word “or” shall be substituted; and

(ii) after the proviso as so amended the following shall be inserted, namely:-

“**Explanation:** For the purpose of this clause “**Trust”**means “a trust shall include any entity that has been registered under the provisions of section 12AA or 12AB of the Income Tax Act 1961 (Central Act No 43 of 1961).”

## STATEMENT OF OBJECTS AND REASONS

It is considered necessary further to amend the Karnataka Stamp Act, 1957 (Karnataka Act 34 of 1957) to give **“Explanation”** for the **“Trust”** as under the provisions of section 12AA or 12AB of the Income Tax Act 1961 (Central Act No 43 of 1961).

Hence the Bill.

## FINANCIAL MEMORANDUM

There is no extra expenditure involved in the proposed Legislative measure.

**R. ASHOKA**
Minister for Reveue

**M.K. VISHALAKSHI**
Secretary
Karnataka Legislative Assembly

## ANNEXURE
## EXTRACT FROM THE KARNATAKA STAMP ACT, 1957
## (Karnataka Act 34 of 1957)

**XXX** **XXX** **XXX**

**SCHEDULE**

**XXX** **XXX** **XXX**

**52. Transfer.-** (whether with or without consideration),

| | |
|---|---|
| (a) of debentures, being Marketable securities, whether the debenture is, liable to duty or not<br>Consideration equal to the face | Fifty paise for every rupees one hundred or part thereof subject to a maximum of one thousand rupees value of the debenture. |
| (b) of any interest secured by a bond, mortgage deed or policy of insurance,-<br>(i) if the duty on such bond, mortgage or policy does not exceed twenty -two rupees and fifty paise | The duty with which such bond, mortgage deed; or policy of insurance is chargeable. |
| (ii) in any other case | One hundred rupees |
| (c) of any property under section 25 of the Administrator Generals Act, 1963 | One hundred rupees |
| (d) of any trust property from one trust to another trust or from Trust to trustee or beneficiary, or from trustee to trust or trustee or beneficiary, as the case may be. | The same duty as a conveyance under Article 20 (1) on the Market value of the property (which is the subject matter of such transfer) or consideration for such transfer, whichever is higher.<br>Provided that for the public religious and charitable trusts, the duty for such transfer shall be rupees one thousand. |
| **Exemption**<br>Transfers by endorsement<br>(a) Of a bill of exchange, cheque or promissory note<br>(b) Of a bill of leading, delivery order, warrant for goods or other mercantile document of title to goods.<br>(c) Of a policy of insurance<br>(d) Of securities of the Central Government or of State Government<br>(See also section 8) | |

**XXX** **XXX** **XXX**

Govt. Press, Vikasa Soudha, Bengaluru, 19th Sept, 2022, P7, W.D. , Copies 500